## ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಹೆಚ್.ಆರ್.ಎಂ.ಎಸ್:ಇತರೆ:2014-15 ದಿನಾಂಕ:18/08/2015

### : ಸು ತ್ತೋ ಲೆ :

**ವಿಷಯ:** ಮಾನವ ಸಂಪನ್ಮೂಲ ಯೋಜನೆಯ ತಂತ್ರಾಂಶದಲ್ಲಿ ಸಿಬ್ಬಂದಿಯ ಹಾಗೂ ಅಧಿಕಾರಿಗಳ ಸೇವಾ ಮಾಹಿತಿ ಅಳವಡಿಸುವ ಬಗ್ಗೆ.

**ಉಲ್ಲೇಖ:** ಈ ಕಛೇರಿ ಸುತ್ತೋಲೆ ಪತ್ರಗಳ ದಿ:03.02.2014, ದಿ:28.03.2014 ದಿ:01.04.2015, ದಿ:04.04.2015 ಮತ್ತು ದಿನಾಂಕ:08.05.2015.

*****

### [ಮಾನವ ಸಂಪನ್ಮೂಲ ನಿರ್ವಹಣಾ ಯೋಜನೆ – ಹೆಚ್.ಆರ್.ಎಂ.ಎಸ್]

01. ರಾಜ್ಯದ ಎಲ್ಲಾ ಶಿಕ್ಷಕರ ಹಾಗೂ ಸಿಬ್ಬಂದಿಯ ಸೇವಾ ವಿವರಗಳನ್ನು ಮಾನವ ಸಂಪನ್ಮೂಲ ನಿರ್ವಹಣಾ ಯೋಜನೆ ತಂತ್ರಾಂಶ [ಹೆಚ್.ಆರ್.ಎಂ.ಎಸ್]ದಡಿಯಲ್ಲಿ ಸೇವಾ ಮಾಹಿತಿಯನ್ನು ಕಡ್ಡಾಯವಾಗಿ ಅಳವಡಿಸಿ ನಮೂದಿಸುವ ಬಗ್ಗೆ ಈ ಕಛೇರಿಯ ಉಲ್ಲೇಖಿತ ಸುತ್ತೋಲೆಗಳ ಪ್ರಕಾರ ಸೂಚನೆಗಳನ್ನು ನೀಡಲಾಗಿತ್ತು.

02. ಪ್ರಸ್ತುತ ಖಜಾನೆ-2 ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದರಿಂದ ಸೇವಾ ಮಾಹಿತಿಯನ್ನು ಮಾನವ ಸಂಪನ್ಮೂಲ ನಿರ್ವಹಣಾ ಯೋಜನೆ [ಹೆಚ್.ಆರ್.ಎಂ.ಎಸ್] ತಂತ್ರಾಂಶದಲ್ಲಿ ಅಳವಡಿಸಿರುವುದನ್ನು ಮತ್ತೊಮ್ಮೆ ಖಚಿತಪಡಿಸಿಕೊಳ್ಳಲು ಸೂಚಿಸಲಾಗಿದೆ.

03. ನಮ್ಮ ರಾಜ್ಯದ ಉಪನಿರ್ದೇಶಕರ ಕಛೇರಿಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯವರು ಖಾಸಗಿ ಸಂಸ್ಥೆ ಅಥವಾ ವ್ಯಕ್ತಿಗಳಿಂದ ಅನಧಿಕೃತವಾಗಿ ಸೇವಾ ವಿವರಗಳ ಮಾಹಿತಿಗಳನ್ನು ಅಳವಡಿಸುತ್ತಿದ್ದಾರೆ ಎಂದು ಕೇಳಿಬರುತ್ತಿದೆ. ಇದು ನಿಜವೇ? ನಿಜವಾಗಿದ್ದಲ್ಲಿ ಇದು ಅಪರಾಧ.

04. ಶಿಕ್ಷಕರ ಸೇವಾ ಪುಸ್ತಕ ಮತ್ತು ಇತರೆ ದಾಖಲೆಗಳ ನಿರ್ವಹಣೆ ಬಗ್ಗೆ ಪರಿಜ್ಞಾನವಿಲ್ಲದೆ ತಪ್ಪು ಮಾಹಿತಿಯ ಅಳವಡಿಕೆಯಿಂದ ಮಾನವ ಸಂಪನ್ಮೂಲ ನಿರ್ವಹಣಾ ಯೋಜನೆ [ಹೆಚ್.ಆರ್.ಎಂ.ಎಸ್] ತಂತ್ರಾಂಶವು ಸಮರ್ಪಕವಾಗಿ ನಿರ್ವಹಣೆ ಮಾಡಲು ಸಾಧ್ಯವಿಲ್ಲ. ಇದರಿಂದಾಗಿ ಸಮಸ್ಯೆಗಳ ಉದ್ಭವಕ್ಕೆ ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಖಾಸಗಿ ಸಂಸ್ಥೆ ಅಥವಾ ವ್ಯಕ್ತಿಗಳಿಂದ ಯಾವುದೇ ಕಾರಣಕ್ಕೂ ಶಿಕ್ಷಣ ಇಲಾಖೆಯ ಸಿಬ್ಬಂದಿಗಳ ಅಥವಾ ಶಿಕ್ಷಕರ ಸೇವಾ ವಹಿಗಳ ಮಾಹಿತಿಯನ್ನು ಖಾಸಗಿಯವರಿಂದ ಅಳವಡಿಸಬಾರದಾಗಿ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

05. ಶಿಕ್ಷಣ ಇಲಾಖೆಯ ಎಲ್ಲಾ ವೇತನ ಸೆಳೆಯುವ ಅಧಿಕಾರಿಗಳಿಗೆ ಈಗಾಗಲೇ ಗಣಕಯಂತ್ರ, ಮುದ್ರಣ ಯಂತ್ರ, ಸಿಬ್ಬಂದಿ, ಸ್ಕ್ಯಾನರ್ ಯಂತ್ರ ಮತ್ತು ಅಂತರ್ಜಾಲ ವ್ಯವಸ್ಥೆಗಳನ್ನು ಒದಗಿಸಿದ್ದು, ಕಡ್ಡಾಯವಾಗಿ ಇಲಾಖಾ ಕಛೇರಿಯಲ್ಲಿಯೇ, ಇಲಾಖಾ ಸಿಬ್ಬಂದಿಯಿಂದಲೇ ಮಾನವ ಸಂಪನ್ಮೂಲ ತಂತ್ರಾಂಶ ಯೋಜನೆಯನ್ನು [ಹೆಚ್.ಆರ್.ಎಂ.ಎಸ್] ಅಳವಡಿಸಬೇಕೆಂದು ಸೂಚಿಸಲಾಗಿದೆ.

06. ಖಾಸಗಿ ಸಂಸ್ಥೆ ಅಥವಾ ವ್ಯಕ್ತಿಗಳಿಂದ ಸೇವಾ ಮಾಹಿತಿ ಅಳವಡಿಕೆಗೆ ಅನುಮತಿ ನೀಡಬಾರದೆಂದು ಹಾಗೂ ನಮೂದಾಗುವ ಮಾಹಿತಿಗಳಿಂದ ತಪ್ಪಾದಲ್ಲಿ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳೇ [Pay Drawing and disbursing officer] ನೇರ ಹೊಣೆಗಾರರೆಂದು ಸ್ಪಷ್ಟಪಡಿಸಲಾಗಿದೆ.

07. ಮಾನವ ಸಂಪನ್ಮೂಲ ನಿರ್ವಹಣಾ ಯೋಜನೆ ತಂತ್ರಾಂಶ [ಹೆಚ್.ಆರ್.ಎಂ.ಎಸ್]ದಲ್ಲಿ ತಪ್ಪಾಗಿರುವುದನ್ನು ಸರಿಪಡಿಸಲು ಕೋರಿ ಈ ಕಛೇರಿಗೆ ಯಾವುದೇ ಪ್ರಸ್ತಾವನೆಗಳು ಅಥವಾ ಪತ್ರಗಳು ಇನ್ನು ಮುಂದೆ ಬಂದಲ್ಲಿ ಸಿ.ಸಿ.ಎ ನಿಯಮದ ಪ್ರಕಾರ ಶಿಸ್ತುಕ್ರಮವನ್ನು ಕೈಗೊಳ್ಳಬೇಕಾಗುತ್ತದೆಯೆಂದು ಸೂಚಿಸಲಾಗಿದೆ.

08. ಯಾವುದೇ ದೋಷಗಳಿಗೆ ಆಸ್ಪದ ನೀಡದೆ ಮಾನವ ಸಂಪನ್ಮೂಲ ಯೋಜನೆಯ ತಂತ್ರಾಂಶದಲ್ಲಿ ಸೇವಾ ಮಾಹಿತಿಗಳನ್ನು ಸರಿಯಾಗಿ ಅಳವಡಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಮತ್ತೊಮ್ಮೆ ಸೂಚಿಸಲಾಗಿದೆ.

21/8/15

[ಕೆ.ಎಸ್.ಸತ್ಯಮೂರ್ತಿ]

ಆಯುಕ್ತರು

**ಇವರಿಗೆ:**

01. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ತ್ವರಿತ ಸೂಕ್ತ ಕ್ರಮಕ್ಕಾಗಿ.

02. ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಡಿ.ಡಿ.ಓ [ವೇತನ ಬಟವಾಡೆ ಅಧಿಕಾರಿ]ಗಳಿಗೆ ಜಿಲ್ಲಾ ಉಪನಿರ್ದೇಶಕರುಗಳ ಮುಖಾಂತರ.

03. ಕಛೇರಿ ಪ್ರತಿ.

\\Typing3server\e\D\HRMS\330-2015.doc